## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 1063/2015 ಸಿಡಬ್ಲೂ: 3 ಪಿಡಬ್ಲೂ: 1

ಪ್ರಮಾಣವಚನ ಬೋಧಿಸಲಾಯಿತು ದಿಃ 12-03-2025

ಹೆಸರು : ಶಿವಶರಣಪ್ಪ

ತಂದೆ ಹೆಸರು : ನಾಗಪ್ಪ

ವಯಸ್ಸು : 75 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ 1 ಮತ್ತು 2 ರವರು ನನಗೆ ಪರಿಚಯವಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತಿಲ್ಲ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇರುವುದಿಲ್ಲ. ಪೋಲೀಸರು ನಮ್ಮ ಸಮಕ್ಷಮ ಯಾವುದೇ ರೀತಿಯ ಪಂಚನಾಮೆಗಳು ಮಾಡಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಜಪ್ತಿ ಪಂಚನಾಮೆ ಆಗಿದ್ದು, ಸಾಕ್ಷಿಯು ಸದರಿ ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಗಿದೆ ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆದರೇ ನಿಪಿ-1 ರಲ್ಲಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ವಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿಃ17-02-2016 ರಂದು ಸಮಯ 12.30 ಗಂಟೆ ಸುಮಾರಿಗೆ ಚಾ ಸಾ 1 ರವರು ನನ್ನನ್ನು ಹಾಗೂ ಚಾ ಸಾ 3 ರಿಂದ 5 ರವರನ್ನು ಬರಮಾಡಿಕೊಂಡು ಸೇಡಂ ಪಟ್ಟಣದಲ್ಲಿರುವ ಚೌ ರಸ್ತೆಯಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಸೇಂದಿ ಮಾರಾಟ ಮಾರುತ್ತಿರುವ ಬಗ್ಗೆ ಖಚಿತ ಬಾತನಿ ಬಂದಿದೆ ಅಂತಾ ತಿಳಿಸಿ ನನ್ನನ್ನು ಹಾಗೂ ಚಾ ಸಾ 2 ರವರಿಗೆ ಪಂಚರಾಗಲು ಕೋರಿಕೊಂಡ ಮೇರೆಗೆ ನಾವು ಅದಕ್ಕೆ ಒಪ್ಪಿ ದ್ದೆವು

ಎಂದರೆ ಸರಿಯಿಲ್ಲ. ನಂತರ ನಾವೆಲ್ಲರೂ ಠಾಣೆಯಿಂದ ಮೊಟಾರು ಸೈಕಲ್ ಮೇಲೆ 12-45 ಕ್ಕೆ ಬಸವ ನಗರಕ್ಕೆ ತಲುಪಿ ಸ್ವಲ್ಪ ದೂರ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ರೂ. 5/- ಗಳಿಗೆ ಒಂದು ಸೇಂದಿ ಪ್ಯಾಕೇಟು ಅಂತಾ ಸೇಂದಿ ಮಾರಾಟ ಮಾರುತ್ತಿರುವ ಬಗ್ಗೆ ಖಚಿತ ಪಡಿಸಿಕೊಂಡು ಆತನ ಮೇಲೆ ದಾಳಿ ಮಾಡಿ ಪರವಾನಗಿ ಬಗ್ಗೆ ವಿಚಾರಿಸಿದಾಗ ಆತನು ತನ್ನ ಹತ್ತಿರ ಯಾವುದೇ ಪರವಾನಗಿ ಇಲ್ಲ ಎಂದು ತಿಳಿಸಿದ್ದು ಎಂದರೆ ಸರಿಯಿಲ್ಲ. ನಂತರ ಆತನ ಹೆಸರ ನ್ನು ವಿಚಾರಣೆ ಮಾಡಲಾಗಿ ರಾಮ್ ತಂದೆ ಕಿಶನ್ ಜಾದವ್ ಎಂದು ತಿಳಿಸಿದ್ದು ಆಗ ಆತನ ಬಳಿ ಶೋದನೆ ಮಾಡಲಾಗಿ ಒಂದು ವೈರ್ ಚೀಲದಲ್ಲಿ ಒಟ್ಟು 30 ಸೇಂದಿ ಪ್ಯಾಕೇಟುಗಳು ಇದ್ದು ನಂತರ ಅದರಲ್ಲಿರುವ 1 ಲೀ ಸೇಂದಿಯನ್ನು ಪ್ರತ್ಯೇಕವಾಗಿ ಜಪ್ತಿ ಮಾಡಿ ಸದರಿ ಬಾಟಲನ್ನು ರಾತಾಯನಿಕ ಪರೀಕ್ಷೆಕುರಿತು ಕಳುಹಿಸಿರುತ್ತಾರೆ ಎಂದರೆ ಸರಿಯಿಲ್ಲ. ನಂತರ ಪಂಚನಾಮೆಯನ್ನು ಮಧ್ಯಾಹ್ನ 01-00 ಗಂಟೆಯಿಂದ 02-00 ಗಂಟೆಯ ವರೆಗೆ ಜಪ್ತಿ ಪಡಿಸಿ ಸದರಿ ಸೇಂದಿಯನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಿಲ್ಲ. ಸಾಕ್ಷಿಯು ಸದರಿ ಸೇಂದಿ ಬಾಟಲನ್ನು ನೋಡಿ ಗುರುತಿಸಲು ನಿರಾಕರಿಸಿರುವುದರಿಂದ ಅದನ್ನು ಮು ಮಾ 1 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**